# ಉಪ-ತಹಶೀಲ್ದಾರರು, ನಾಡಕಾರ್ಯಾಲಯ, ತೆಕ್ಕಲಕೋಟೆ.
## ಇವರ ನ್ಯಾಯಾಲಯದಲ್ಲಿ

ವಾದಿಗಳು: ವಿರುದ್ಧ: ಪ್ರತಿವಾದಿಗಳು

1) ಮಹಾಂಕಾಳಮ್ಮ
ಗಂಡ: ಬಳ್ಳಾರಿ ಪಕ್ಕೀರಪ್ಪ
ಪೊಪ್ಪನಾಳು ಗ್ರಾಮ,

1) ಗಂಗಮ್ಮ ತಂದೆ: ದಿವಂಗತ ಪಕ್ಕೀರಪ್ಪ
2) ಸಣ್ಣ ಕಾಳಮ್ಮ ಗಂಡ: ದಿವಂಗತ ಸೋಮಣ್ಣ
3)ಓಬಳಮ್ಮ ಗಂಡ: ಕಾಳಪ್ಪ
4)ಸೋಮಣ್ಣ ತಂದೆ: ದಿವಂಗತ ಶಿವಣ್ಣ,
5)ಕಾಳಪ್ಪ ತಂದೆ: ದಿವಂಗತ ಶಿವಣ್ಣ
6)ಮುದುಕಪ್ಪ ತಂದೆ: ದಿವಂಗತ ಶಿವಣ್ಣ
7)ಶಿದ್ದಮ್ಮ ತಂದೆ: ದಿವಂಗತ ಶಿವಪ್ಪ
8)ಶಿದ್ದಯ್ಯ ತಂದೆ: ದಿವಂಗತ ಶಿವಣ್ಣ
9)ಹನುಮಂತ ತಂದೆ: ದಿವಂಗತ ಶಿವಣ್ಣ

** ** **

| ಕ್ರ.ಸಂ. | ತಾಲೂಕು | ಹೋಬಳಿ | ಗ್ರಾಮ | ಸರ್ವೆ ನಂಬರು | ವಿಸ್ತೀರ್ಣ: | ತರಂ |
|---|---|---|---|---|---|---|
| 01 | ಸಿರುಗುಪ್ಪ | ತೆಕ್ಕಲಕೋಟೆ | ಪೊಪ್ಪನಾಳು | 77/2<br>77/4<br>87/2 | 0-52<br>1-12<br>2-56 | - |

**ಪೀಠಿಕೆ** :-

ಸಿರುಗುಪ್ಪ ತಾಲೂಕು, ತೆಕ್ಕಲಕೋಟೆ ಹೋಬಳಿ, ಪೊಪ್ಪನಹಾಳು ಗ್ರಾಮದ ಮೇಲ್ಕಾಣಿಸಿದ ಜಮೀನಿನ ಹಕ್ಕು ಬದಲಾವಣೆಗೆ ಸಂಬಂಧಿಸಿದಂತೆ ದಿನಾಂಕ: 21-01-2014ರಂದು ತಾಲೂಕು ಕಛೇರಿ ಭೂಮಿ ಕೇಂದ್ರದಲ್ಲಿ ಪೋತಿವಾರಸ ಪ್ರಕಾರ ಹಕ್ಕು ಬದಲಾವಣೆಗೆ ಅರ್ಜಿ ಸ್ವೀಕೃತವಾಗಿದ್ದು, ಸದರಿ ಅರ್ಜಿಯ ಬಗ್ಗೆ ಹಕ್ಕು ಬದಲಾವಣೆ ಪ್ರಕ್ರಿಯೆ ಜರುಗಿಸಲು ದಿನಾಂಕ: 27-01-2014ರಂದು ನಮೂನೆ- 21 ನೋಟೀಸ್ ತಯಾರಿಸಿ ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರಿಗೆ ಕಳುಹಿಸಿ ಕೊಡಲಾಗಿ ಗ್ರಾಮದಲ್ಲಿ ನಮೂನೆ-21 ನೋಟಿಸು ಜಾರಿ ಮಾಡಿರುವ ಸಮಯದಲ್ಲಿ ನಿಗದಿತ ಅವಧಿಯೊಳಗಾಗಿ ಅಸಕ್ತಿ ಉಳ್ಳವರಿಂದ ತಕರಾರು ಅರ್ಜಿ ಸ್ವೀಕೃತವಾಗಿರುವುದರಿಂದ ಇದೊಂದು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ಕಡತ ಸಲ್ಲಿಸಿರುತ್ತಾರೆ.

ಸದ್ರಿ ವಿವಾದಾಸ್ಪದ ಪ್ರಕರಣವನ್ನು ಈ ಕಾರ್ಯಾಲಯದ ವಿವಾದಾಸ್ಪದ ಪ್ರಕರಣದ ವಹಿಯಲ್ಲಿ ನಮೂದಿಸಿ ಕೊಂಡು ಕರ್ನಾಟಕ ಭೂ ಕಂದಾಯ ಕಾಯ್ದೆ ನಿಯಮಗಳು 1966 ನಿಯಮ 43 ಮತ್ತು 67ರಂತೆ ವಿಚಾರಣೆ ದಿನಾಂಕ ನಿಗದಿಪಡಿಸಿ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸ್ ನೀಡಿ ವಿಚಾರಣೆ ಮಾಡಿ ವಿಚಾರಣೆಯನ್ನು ಮುಕ್ತಾಯ ಗೊಳಿಸಲಾಯಿತು.

ಸದ್ರಿ ವಿವಾದಾಸ್ಪದ ಪ್ರಕರಣದ ವಿಚಾರಣೆ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ವಾದಿಗಳು ಸರ್ವೆ ನಂ.72/2 ವಿ:0-52ಸೆಂಟ್ಸ್, ಸರ್ವೆ ನಂ.77/4 ವಿ:1-12ಎಕರೆ ಜಮೀನಿನಲ್ಲಿ ನಮ್ಮ ತಾತನಾದ ದೇವೇಂದ್ರಪ್ಪ ತಂದೆ: ಈರಣ್ಣ ಇವರ ಹೆಸರನ್ನು ಬಿಟ್ಟು ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಕಾರಣ ಸದ್ರಿ ಹಕ್ಕು ಬದಲಾವಣೆಗೆ ತಕರಾರು ಅರ್ಜಿಸಲ್ಲಿಸಿರುತ್ತೇನೆ ಆದರೆ ಗ್ರಾಮದಲ್ಲಿ ಹಿರಿಯರ ಸಮಕ್ಷಮ ರಾಜಿಯಾಗಿದ್ದು ಹಕ್ಕು ಬದಲಾವಣೆ ಸಮಯದಲ್ಲಿ ಬಿಟ್ಟು ಹೋಗಿರುವ ನಮ್ಮ ತಾತನ ಹೆಸರನ್ನು ಸೇರಿಸಿ ಹಕ್ಕು ಬದಲಾವಣೆ ಮಾಡಲು ಎಲ್ಲಾರು ಒಪ್ಪಿಗೆ ನೀಡಿರುವುದರಿಂದ ನನ್ನ ತಕರಾರನ್ನು ನಾನು ಹಿಂಪಡೆಯುವುದಾಗಿ ರೂ.20 ರೂ ಛಾಪಾಕಾಗದದ ಮೇಲೆ ಒಪ್ಪಿಗೆ ನೀಡಿರುತ್ತಾರೆ.

ವಿವಾದಾಸ್ಪದ ಪ್ರಕರಣದ ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಗಿ ಹಾಗೂ ವಾದಿ ಮತ್ತು ಪ್ರತಿವಾದಿಗಳ ವಾದಗಳನ್ನು ಆಲಿಸಲಾಗಿ ವಾದಿಗಳ ವಾದವನ್ನು ಪುರಸ್ಕರಿಸಿ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿರುವ ಸಮಯದಲ್ಲಿ ಮೂಲ ಪಟ್ಟಾದಾರರಾದ ದೇವೇಂದ್ರಪ್ಪ ತಂದೆ: ಈರಣ್ಣ ಇವರ ಹೆಸರನ್ನು ಬಿಟ್ಟು ಚಕ್‌ಲೀಸ್ಟ್ ತೆಗೆದಿರುವುದು ಕಂಡು ಬಂದಿರುತ್ತದೆ ಹಾಗೂ ವಾದಿಗಳು ಸದ್ರಿ ಬಿಟ್ಟು ಹೋಗಿರುವ ಹೆಸರನ್ನು ಸೇರಿಸಿ ಹಕ್ಕು ಬದಲಾವಣೆ ಮಾಡಲು ಒಪ್ಪಿದಲ್ಲಿ ತಮ್ಮ ತಕರಾರನ್ನು ಹಿಂಪಡೆಯುವುದಾಗಿ ರೂಪಾಯಿ 20ರೂ ಛಾಪಾ ಕಾಗದದ ಮೇಲೆ ಒಪ್ಪಿಗೆ ನೀಡಿರುವುದರಿಂದ ಹಾಗೂ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ. 128 ಮತ್ತು 129 ಪ್ರಕಾರ ಕ್ರಮ ಕೈಗೊಳ್ಳುವ ಅವಶ್ಯಕತೆ ಇರುವುದರಿಂದ ಈ ಕೆಳಗಿನಂತೆ.

## ಆ ದೇ ಶ

ಸಂ:ಕಂ:ಹ.ಬ.:ವಿವಾದ: 88/2015-16 ದಿನಾಂಕ: 07-06-2016

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ ಹಾಗೂ ದಾಖಲೆಗಳ ಆದಾರದನ್ವಯ ಸಿರುಗುಪ್ಪ ತಾಲೂಕು ತೆಕ್ಕಲಕೋಟೆ ಹೋಬಳ, ಪೊಪ್ಪನಾಳು ಗ್ರಾಮದ ಸರ್ವೆನಂ.77/2 (ವಿ) 0-52ಸೆಂಟ್ಸ್, ಸರ್ವೆನಂ.77/4 (ವಿ) 1-12ಎಕರೆ, ಸರ್ವೆನಂ.87/2 (ವಿ) 2-56ಎಕರೆ ಜಮೀನುಗಳನ್ನು ಹಕ್ಕು ಬದಲಾವಣೆಗೆ ಸಂಬಂದಿಸಿದಂತೆ ಸರ್ವೆ ನಂ.87/2 ವಿ:2-56 ಎಕರೆ ಜಮೀನು ಚೆಕ್‌ಲೀಸ್ಟ್‌ನಂತೆ ಉಳಿಸಿ, ಉಳಿದ ಸರ್ವೆ ನಂಬರಗಳ ಚೆಕ್‌ಲಿಸ್ಟ್‌ನಲ್ಲಿ ದೇವೇಂದ್ರಪ್ಪ ತಂದೆ: ಈರಣ್ಣ ಇವರ ಹೆಸರನ್ನು ಸೇರಿಸಿ ಚೆಕ್‌ಲೀಸ್ಟ್ ಪ್ರಕಾರ ಪೋತಿ ಪೀ ತುಂಬಿಕೊಂಡು ಪೋತಿವಾರಸ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಸದರಿ ಆದೇಶವನ್ನು ಬೆರಳಚ್ಚು ಮಾಡಿಸಿ ಓದಿ ತಪ್ಪುಗಳನ್ನು ತಿದ್ದಿ ಸರಿಪಡಿಸಿ ದಿನಾಂಕ: 07-06-16 ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಲಾಯಿತು.

ಉಪ ತಹಶೀಲ್ದಾರರು,
ನಾಡಕಾರ್ಯಾಲಯ
ತೆಕ್ಕಲಕೋಟೆ.

ಪ್ರತಿಯನ್ನು:

1) ವಾದಿ ಮತ್ತು ಪ್ರತಿವಾದಿಗಳಿಗೆ,
2) ಭೂಮಿ ಕೇಂದ್ರ, ತಾಲೂಕು ಕಛೇರಿಗೆ.